# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 841(1027) |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳಾವುವು? ಇವುಗಳು ಯಾವ ಹಂತದಲ್ಲಿದೆ (ವಿವರ ಒದಗಿಸುವುದು) | ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ)ಯಲ್ಲಿ ಬರುವ 4 ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಡಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳು ಹಾಗೂ ಪ್ರಸುತ್ತ ಹಂತದ ವಿವರಗಳನ್ನು ನಿಗಮವಾರು ಕ್ರಮವಾಗಿ **ಅನುಬಂಧ-1,2,3,4**,ರಲ್ಲಿ ನೀಡಲಾಗಿದೆ. |
| ಆ) | ಎತ್ತಿನಹೊಳೆ ಯೋಜನೆಯ ಯಾವ ಉದ್ದೇಶಕ್ಕಾಗಿ, ಯಾವ ವರ್ಷದಲ್ಲಿ ಪ್ರಾರಂಭವಾಯಿತು; ಪ್ರಾರಂಭದ ಸಮಯದಲ್ಲಿ ಯೋಜನೆಯ ಮೊತ್ತವೆಷ್ಟಿತ್ತು? ಪ್ರಸಕ್ತ ವರ್ಷದ ಮೊತ್ತವೆಷ್ಟು? (ಸಂಪೂರ್ಣವಾದ ಮಾಹಿತಿ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಬರಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ ಹಾಗೂ ತುಮಕೂರು ವ್ಯಾಪ್ತಿಯಲ್ಲಿ ಬರುವ 527 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಿ ಅಂತರ್ಜಲ ಮರುಪೂರಣಗೊಳಿಸುವ ಉದ್ದೇಶದಿಂದ, 2013-14ನೇ ಸಾಲಿನಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ಈ ಯೋಜನೆಯ ಮೂಲ ಅಂದಾಜು ಮೊತ್ತವು ರೂ.8,323.50 ಕೋಟಿಗಳಾಗಿದ್ದು, ಸದರಿ ಯೋಜನೆಯ ಅಂದಾಜು ಮೊತ್ತವನ್ನು 2 ಬಾರಿ ಪರಿಷ್ಕರಿಸಲಾಗಿದ್ದು, ಪ್ರಸ್ತುತ, ಯೋಜನೆಯ ಅಂದಾಜು ಮೊತ್ತವು ರೂ.23,251.66 ಕೋಟಿಗಳಾಗಿದೆ. |
| ಇ) | ಈ ಯೋಜನೆಯಲ್ಲಿ ಎಷ್ಟು ಕಾಮಗಾರಿ ಪೂರ್ಣಗೊಂಡಿದೆ? ಇತ್ತೀಚೆಗೆ ಯೋಜನೆಯ ಅಂದಾಜು ವೆಚ್ಚ ಹೆಚ್ಚಾಗಲು ಕಾರಣವೇನು? (ಸಂಪೂರ್ಣವಾದ ಮಾಹಿತಿ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಹಂತ-1 ರಲ್ಲಿನ ಏತ (lift) ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಈ ಪೈಕಿ ಪ್ರಸ್ತುತ ವಿಯರ್-1, 4 & 5 ರಿಂದ ನೀರನ್ನೆತ್ತಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಕ್ರಮ ವಹಿಸಲಾಗಿದೆ. ಲಿಫ್ಟ್ ಕಾಮಗಾರಿಗಳ ಉಳಿದ 5 ವಿಯರ್‌ಗಳ ಕಾಮಗಾರಿ, ಗುರುತ್ವ ಕಾಲುವೆ (Gravity main canal) ನಿರ್ಮಾಣ ಕಾಮಗಾರಿ, ಸಮತೋಲನಾ ಜಲಾಶಯಕ್ಕಿಂತ (Balancing Reservoir) ಮೊದಲು ಕವಲೊಡೆಯುವ ಮಧುಗಿರಿ ಫೀಡರ್, ಟಿ.ಜಿ.ಹಳ್ಳಿ- ರಾಮನಗರ ಫೀಡರ್ ಹಾಗೂ ಗೌರಿಬಿದನೂರು ಫೀಡರ್ ಪೈಪ್‌ಲೈನ್ ಕಾಮಗಾರಿ, ಸಮತೋಲನಾ ಜಲಾಶಯದ (Balancing Reservoir) ನಂತರದಲ್ಲಿ ಬರುವ ಲಿಫ್ಟ್ ಕಾಮಗಾರಿ ಮತ್ತು ಸ:22.30 ಕಿ.ಮೀ ವರೆಗಿನ ಗುರುತ್ವ ಪೈಪ್‌ಲೈನ್ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.<br><br>ಹೊಸ ಭೂಸ್ವಾಧಿನ ಕಾಯ್ದೆಯ ಅನುಷ್ಠಾನ, ದರ ಪರಿಷ್ಕರಣೆ, ಟೆಂಡರ್ ಪ್ರೀಮಿಯಂ, ಸರಕು ಮತ್ತು ಸೇವಾ ತೆರಿಗೆ ಹೆಚ್ಚಳ, ಪಥ ಬದಲಾವಣೆಯಿಂದ ಹೆಚ್ಚುವರಿ ಕಾಮಗಾರಿಗಳ ಅಳವಡಿಕೆ, ಫೀಡರ್ ಕಾಲುವೆಗಳಲ್ಲಿ ತೆರೆದ ಕಾಲುವೆ ಬದಲಾಗಿ ಪೈಪ್‌ಲೈನ್ ಅಳವಡಿಕೆ ಮುಂತಾದ ಕಾರಣಗಳಿಂದ ಸದರಿ ಯೋಜನೆಯ ಅಂದಾಜು ಮೊತ್ತ ಹೆಚ್ಚಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಈ) | ಈ ಯೋಜನೆಯಿಂದ ಯಾವ ಯಾವ ಜಿಲ್ಲೆಗೆ ಎಷ್ಟು ಟಿ.ಎಂ.ಸಿ ನೀರು ದೊರೆಯಬಹುದು ಎಂದು ಅಂದಾಜಿಸಲಾಗಿದೆಯೇ ? ಈ ಯೋಜನೆಯು ಯಾವ ವರ್ಷದಲ್ಲಿ ಪೂರ್ಣಗೊಳ್ಳುವುದು (ಸಂಪೂರ್ಣವಾದ ಮಾಹಿತಿ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಜಿಲ್ಲಾವಾರು ಹಂಚಿಕೆಯಾಗಿರುವ ನೀರಿನ ವಿವರಗಳು ಈ ಕೆಳಗಿನಂತಿವೆ. |

| ಕ್ರ. ಸಂ | ಜಿಲ್ಲೆ | ಕುಡಿಯುವ ನೀರಿಗಾಗಿ ನೀರಿನ ಹಂಚಿಕೆ ಪ್ರಮಾಣ (ಟಿ.ಎಂ.ಸಿ) | ಕೆರೆ ತುಂಬಿಸಲು ಹಂಚಿಕೆಯಾದ ನೀರಿನ ಪ್ರಮಾಣ (ಟಿ.ಎಂ.ಸಿ.) | | ಒಟ್ಟು ನೀರಿನ ಪ್ರಮಾಣ (ಟಿ.ಎಂ.ಸಿ) |
|---|---|---|---|---|---|
| | | ನೀರಿನ ಪ್ರಮಾಣ | ಕೆರೆಗಳ ಸಂಖ್ಯೆ | ನೀರಿನ ಪ್ರಮಾಣ | |
| 1 | ಚಿಕ್ಕಮಗಳೂರು | 0.154 | - | - | 0.154 |
| 2 | ಹಾಸನ | 0.641 | 34 | 0.8 | 1.44 |
| 3 | ತುಮಕೂರು | 2.169 | 113 | 3.557 | 5.726 |
| 4 | ಕೋಲಾರ | 2.842 | 138 | 2.064 | 4.906 |
| 5 | ಚಿಕ್ಕಬಳ್ಳಾಪುರ | 2.217 | 196 | 2.876 | 5.093 |
| 6 | ಬೆಂಗಳೂರು ಗ್ರಾಮಾಂತರ | 1.924 | 46 | 1.067 | 2.991 |
| 7 | ರಾಮನಗರ | 1.834 | - | - | 1.834 |
| 8 | ಟಿ.ಜಿ.ಹಳ್ಳಿ ಜಲಾಶಯ | 1.400 | - | - | 1.4 |
| 9 | ಹೆಸರಘಟ್ಟ ಜಲಾಶಯ | 0.500 | - | - | 0.5 |
| 10 | ದೇವನಹಳ್ಳಿ ಕೈಗಾರಿಕಾ ಪ್ರದೇಶ | 0.250 | - | - | 0.25 |
| 11 | ಕಾಲುವೆಯ ಬದಲಾಗಿ ಪೈಪ್ ಕಾಮಗಾರಿ ನಿರ್ಮಾಣದಿಂದಾಗಿ ಉಂಟಾದ Transimission losses ಹಾಗೂ ಕಾಲುವೆ ಉದ್ದದಿಂದ ಉಳಿತಾಯಗಾಗಿ ಒಟ್ಟಾರೆಯಾಗಿ 0.3 ಟಿ.ಎಂ.ಸಿ ರಷ್ಟು ನೀರು ಉಳಿತಾಯವಾಗಿರುತ್ತದೆ. | - | - | 0.30 | - |
| | **ಒಟ್ಟು** | **13.931** | **527** | **10.064** | **24.01** |

ಎತ್ತಿನಹೊಳೆ ಯೋಜನೆಯನ್ನು ಅನುದಾನದ ಲಭ್ಯತೆ ಮೇರೆಗೆ ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು

**ಸಂಖ್ಯೆ: ಜಸಂಇ 148 ಎಂಎಲ್ಎ 2023**

**(ಡಿ.ಕೆ.ಶಿವಕುಮಾರ್)**

ಉಪ ಮುಖ್ಯ ಮಂತ್ರಿ

## ಅನುಬಂಧ-1

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) ಇವರ ಪ್ರಶ್ನೆ ಸಂಖ್ಯೆ:841(1027)ಕ್ಕೆ ಉತ್ತರ

### ಕೃಷ್ಣಾ ಮೇಲ್ದಂಡೆ ಯೋಜನೆ ಹಂತ – 3 ರಡಿಯ ಉಪ ಯೋಜನೆಗಳು

ರೂ. ಕೋಟಿಗಳಲ್ಲಿ

| ಕ್ರ ಸಂ. | ಯೋಜನೆ | ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಇಲ್ಲಿಯವರೆಗೆ ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಪ್ರಸ್ತುತ ಹಂತ |
|---|---|---|---|---|---|
| 01 | ಮುಳವಾಡ ಏತ ನೀರಾವರಿ ಯೋಜನೆ | 5398.55 | 2,27,966 | 37,000 | ಮುಖ್ಯ ಸ್ಥಾವರಗಳ ಕೆಲಸ ಪೂರ್ಣಗೊಂಡಿದ್ದು, ಕಾಲುವೆ ಜಾಲದ ಕೆಲಸ ಪ್ರಗತಿಯಲ್ಲಿದೆ. |
| 02 | ಚಿಮ್ಮಲಗಿ ಏತ ನೀರಾವರಿ ಯೋಜನೆ | 2148.02 | 87077 | 34,000 | ಮುಖ್ಯ ಸ್ಥಾವರ & ಮುಖ್ಯ ಕಾಲುವೆ ಕಾಮಗಾರಿ ಪೂರ್ಣಗೊಂಡಿದೆ. ವಿತರಣಾ ಕಾಲುವೆ ಸಂ. 30 ರಿಂದ 60 ರ ವರೆಗಿನ ಕಾಮಗಾರಿ ಪ್ರಗತಿಯಲ್ಲಿದೆ. |
| 03 | ಹೆರಕಲ್ ಏತ ನೀರಾವರಿ ಯೋಜನೆ | 339.04 | 15344 | 4,058 | ಮುಖ್ಯ ಸ್ಥಾವರಗಳು ಪೂರ್ಣಗೊಂಡಿದ್ದು, ಕಾಲುವೆ ಜಾಲ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. |
| 04 | ಇಂಡಿ ಏತ ನೀರಾವರಿ ಯೋಜನೆ (ಗುತ್ತಿ ಬಸವಣ್ಣ) | 367.56 | 20690 | 19,165 | ಪೂರ್ಣಗೊಳಿಸಲಾಗಿದೆ. |
| 05 | ಕೊಪ್ಪಳ ಏತ ನೀರಾವರಿ ಯೋಜನೆ | 7769.46 | 112015 | 0 | ಕಾಮಗಾರಿ ಪ್ರಗತಿಯಲ್ಲಿದೆ. |
| 06 | ರಾಂಪೂರ ಏತ ನೀರಾವರಿ ಯೋಜನೆ | 179.87 | 13923 | 10,672 | ಪೂರ್ಣಗೊಳ್ಳುವ ಹಂತದಲ್ಲಿದೆ |
| 07 | ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ | 963.5 | 61747 | 11,655 | 95.00 ರಿಂದ 145.00 ಕಿ.ಮೀ., 155.00 ರಿಂದ 168.00 ಕಿ.ಮೀ. ವರೆಗಿನ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. 145.00 ರಿಂದ 155.00 ಕಿ.ಮೀ. ವರೆಗಿನ ಕಾಲುವೆ ನಿರ್ಮಾಣ ಕಾಮಗಾರಿ ಪ್ರಗತಿ ವಿವಿಧ ಹಂತದಲ್ಲಿರುತ್ತದೆ. |
| 08 | ಮಲ್ಲಬಾದ್ ಏತ ನೀರಾವರಿ ಯೋಜನೆ | 578.27 | 33730 | 5,530 | 3 ಮುಖ್ಯ ಸ್ಥಾವರ ಮತ್ತು ಮುಖ್ಯ ಕಾಲುವೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿತರಣಾ ಕಾಲುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. |

| | | | | | |
|---|---|---|---|---|---|
| 09 | ಭೀಮಾ ಫ್ಲ್ಯಾಂಕ್ | 271.57 | 21572 | 0 | ಸದರಿ ಯೋಜನೆಯ 75.30 ರಿಂದ 98.30 ಕಿ.ಮೀ. ರವರೆಗಿನ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಗಳ ಬಾಕಿ ಕಾಮಗಾರಿಗಳಿಗೆ ಟೆಂಡರ್ ಕರೆಯುವ ಹಂತದಲ್ಲಿರುತ್ತದೆ. |
| | **ಒಟ್ಟು** | **18,028.44** | **594064** | **1,22,080** | |

**ಇತರೆ ನೀರಾವರಿ ಯೋಜನೆಗಳು, ಕಾಲುವೆ ಆಧುನೀಕರಣ ಕಾಮಗಾರಿಗಳು, ಕೆರೆ ತುಂಬುವ ಯೋಜನೆಗಳು ಮತ್ತು ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳು**

| ಕ್ರ.ಸಂ | ಯೋಜನೆ | ಅಂದಾಜು ಮೊತ್ತ ರೂ.ಕೋಟಿಗಳಲ್ಲಿ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಇಲ್ಲಿಯವರೆಗೆ ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಪ್ರಸ್ತುತ ಹಂತ |
|---|---|---|---|---|---|
| 01 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | 1100.00 | 38000 | 38000 | ಯೋಜನೆಯ 2ನೇ ಹಂತದಡಿಯ ಹನಿ ನೀರಾವರಿ ವ್ಯವಸ್ಥೆಯನ್ನು 2017ನೇ ಸಾಲಿನಿಂದ ಕಾರ್ಯಚರಣೆಗೊಳಿಸಲಾಗಿದ್ದು, ಫಲಾನುಭವಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರಸ್ತುತ ನಿರ್ವಹಣೆ ಹಂತದಲ್ಲಿರುತ್ತದೆ. |
| 02 | ಸನ್ನತಿ ಏತ ನೀರಾವರಿ ಯೋಜನೆ | 804.66 | 16000 | 10650 | ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗಳು ಪೂರ್ಣಗೊಳಿಸಲಾಗಿರುತ್ತದೆ. |
| 03 | ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆ (ಹಂತ-1) | 1300.00 | 20243 | 0 | ಯೋಜನೆಯಡಿ ಮುಖ್ಯ ಸ್ಥಾವರದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಕಾಲುವೆ ಜಾಲದ ಪೈಪ್‌ಲೈನ್ ಮುಖಾಂತರ ಕೈಗೆತ್ತಿಕೊಳ್ಳುವ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 04 | ನಂದವಾಡಗಿ ಏತ ನೀರಾವರಿ ಯೋಜನೆ | 1530.00 | 36100 | 0 | ಮುಖ್ಯ ಸ್ಥಾವರದ ಕಾಮಗಾರಿ ಬಹುತೇಕ ಪೂರ್ಣಗೊಂಡಿರುತ್ತದೆ. ಯೋಜನೆಯಡಿ 36,100 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ಹನಿ ನೀರಾವರಿ ಕಲ್ಪಿಸುವ ಕಾಮಗಾರಿಯನ್ನು ಟರ್ನ ಕೀ ಆಧಾರದ ಮೇಲೆ 3 ಪ್ಯಾಕೇಜ್ ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಪ್ಯಾಕೇಜ್ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ. |
| 05 | ನಾ.ಬ.ದಂ.ಕಾ. ವಿತರಣಾ ಕಾಲುವೆ – 9ಎ | 281.00 | 15250 | 14718 | ಕಾಮಗಾರಿ ಪೂರ್ಣಗೊಂಡಿದೆ. |
| 06 | ನಾಗರಬೆಟ್ಟ ಏತ ನೀರಾವರಿ ಯೋಜನೆ | 170.70 | 3200 | 2000 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಬಹುತೇಕ ಪೂರ್ಣಗೊಂಡಿದ್ದು, ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದೆ. |
| 07 | ಹೆರಕಲ್ ದಕ್ಷಿಣ ಏತ ನೀರಾವರಿ ಯೋಜನೆ-ವಿಸ್ತರಣೆ | 238.00 | 6100 | 0 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಪ್ರಗತಿಯಲ್ಲಿದ್ದು ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗೆ ಇತ್ತೀಚೆಗೆ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರ.ಸಂ | ಯೋಜನೆ | ಅಂದಾಜು ಮೊತ್ತ ರೂ.ಕೋಟಿಗಳಲ್ಲಿ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಇಲ್ಲಿಯವರೆಗೆ ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಪ್ರಸ್ತುತ ಹಂತ |
|---|---|---|---|---|---|
| 08 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | 35.00 | 700 | 500 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಬಹುತೇಕ ಪೂರ್ಣಗೊಂಡಿದ್ದು, ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ. |
| 09 | ಚಡಚಣ ಏತ ನೀರಾವರಿ ಯೋಜನೆ | 483.00 | 9215 | 3250 | ಯೋಜನೆಯಡಿಯ ಮುಖ್ಯ ಸ್ಥಾವರದ ಮತ್ತು ಕಾಲುವೆ ಜಾಲದ ನಿರ್ಮಾಣ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಗೆ ಉದ್ದೇಶಿಸಿದ ನೀರಿನ ಪ್ರಮಾಣದ ಲಭ್ಯತೆಗೆ ಅನುಕೂಲ ಹಾಗೂ ಪೂರಕವಾಗಿಸಲು ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮರಾಣಿ ಬ್ರಿಡ್ಜ್ ಕಂ ಬ್ಯಾರೇಜಿನ ಪುನಶ್ಚೇತನ ಕಾಮಗಾರಿ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| 10 | ಬೂದಿಹಾಳ–ಪೀರಾಪೂರ ಏತ ನೀರಾವರಿ ಯೋಜನೆ ವಿಸ್ತರಣೆ (ಹಂತ–2) | 800.00 | 17805 | 0 | ಯೋಜನೆಗೆ ಸರ್ಕಾರವು ದಿನಾಂಕ 19.11.2020 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| 11 | ಕೆರೂರು ಏತ ನೀರಾವರಿ ಯೋಜನೆ | 950.00 | 16000 | 0 | ಯೋಜನೆಗೆ ಸರ್ಕಾರವು ದಿನಾಂಕ 06.03.2021 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಅದರನ್ವಯ ಸದರಿ ಯೋಜನೆಯ ಮುಖ್ಯ ಸ್ಥಾವರದ ಕಾಮಗಾರಿಗೆ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| 12 | ಹೊರ್ತಿ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ | 2639.00 | 28,000 | 0 | ಸದರಿ ಯೋಜನೆಗೆ ಸರ್ಕಾರವು ದಿನಾಂಕ 07.09.2022ರಂದು ಸದರಿ ಯೋಜನೆಯನ್ನು 3 ಹಂತಗಳಲ್ಲಿ ಅಂದರೆ, ಮೊದಲನೇ ಹಂತದಲ್ಲಿ ರೂ.760.00 ಕೋಟಿ, 2ನೇ ಹಂತದಲ್ಲಿ ರೂ.939.00 ಕೋಟಿ ಮತ್ತು 3ನೇ ಹಂತದಲ್ಲಿ ರೂ.939.00 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಪ್ರಸ್ತುತ ಹಂತ–1 ಕ್ಕೆ ಟೆಂಡರ್ ಆಧಾರದ ಮೇಲೆ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |
| 13 | ಭಗವತಿ ಏತ ನೀರಾವರಿ ಯೋಜನೆ ಕಾಲುವೆ ಆಧುನೀಕರಣ ಕಾಮಗಾರಿಗಳು | 346.00 | 8390 | 0 | ಸದರಿ ಯೋಜನೆಗೆ ಸರ್ಕಾರವು ದಿನಾಂಕ 01.08.2022ರಂದು ಸದರಿ ಯೋಜನೆಯನ್ನು 2 ಹಂತಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಪ್ರಸ್ತುತ ಹಂತ–1 ಕ್ಕೆ ಟೆಂಡರ್ ಆಧಾರದ ಮೇಲೆ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರ.ಸಂ | ಯೋಜನೆ | ಅಂದಾಜು ಮೊತ್ತ ರೂ.ಕೋಟಿಗಳಲ್ಲಿ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಇಲ್ಲಿಯವರೆಗೆ ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಪ್ರಸ್ತುತ ಹಂತ |
|---|---|---|---|---|---|
| **ಕಾಲುವೆ ಆಧುನೀಕರಣ ಕಾಮಗಾರಿಗಳು** | | | | | |
| 14 | ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ (ಆಯ್ದ ಭಾಗಗಳು | 120.00 | 0 | 0 | ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆ ಕಿ.ಮೀ.0.00 ದಿಂದ 68.24 (ಆಯ್ದ ರೀಚ್‌ಗಳು) ರ ಆಧುನೀಕರಣದ ಪ್ಯಾಕೇಜ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಪ್ರಸ್ತುತ ವಿತರಣಾ ಕಾಲುವೆ ಜಾಲದ ಆಧುನೀಕರಣದ 3 ಪ್ಯಾಕೇಜ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| 15 | ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ (ವಿತರಣಾ ಕಾಲುವೆಗಳ ಹಾಗೂ ಸೀಳುಗಾಲುವೆಗಳ) ಯೋಜನೆ – ಎ.ಐ.ಬಿ.ಪಿ. ಯೋಜನೆ | 4199.00 | 0 | 0 | ಯೋಜನೆಗೆ ಸರ್ಕಾರವು ದಿನಾಂಕ 22.04.2021 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.<br>ಕೇಂದ್ರ ಸಹಾಯಧನ ಪಡೆಯುವ ನಿಟ್ಟಿನಲ್ಲಿ ದಿನಾಂಕ:15.07.2021 ರಂದು ಜರುಗಿದ Screening Committee, ಕೇಂದ್ರ ಜಲ ಆಯೋಗ, ನವದೆಹಲಿ ಇಲ್ಲಿ ಚರ್ಚಿಸಲ್ಪಟ್ಟು, ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ದಿನಾಂಕ:20.07.2021 ರಂದು ತಾತ್ವಿಕ ಅನುಮೋದನೆನೀಡಿರುತ್ತದೆ. ಪ್ರಸ್ತುತ ವಿತರಣಾ ಕಾಲುವೆ ಜಾಲದ ಆಧುನೀಕರಣದ 2 ಪ್ಯಾಕೇಜ ಕಾಮಗಾರಿಗಳು ಕಾಮಗಾರಿ ಪ್ರಗತಿಯಲ್ಲಿದೆ. |
| 16 | ನಾರಾಯಣಪೂರ ಎಡದಂಡೆ ಕಾಲುವೆ ಜಾಲದ ಆಧುನೀಕರಣ (ಎನ್.ಎಲ್.ಬಿ.ಸಿ.–ಇ.ಆರ್.ಎಂ.) – ಎ.ಐ.ಬಿ.ಪಿ. ಯೋಜನೆ | 4699.00 | 0 | 0 | ಕೇಂದ್ರ ಸರ್ಕಾರದ ಪಾಲು ರೂ. 940.50 ಕೋಟಿ ಮೊತ್ತದ ಪೈಕಿ ಇಲ್ಲಿಯವರೆಗೆ ರೂ.929.40 ಕೋಟಿ ಬಿಡುಗಡೆಯಾಗಿರುತ್ತದೆ. ಬಾಕಿ ಉಳಿದ ರೂ.11.10 ಕೋಟಿ ಮೊತ್ತದ ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆಗೊಳಿಸುವ ಪ್ರಸ್ತಾವನೆಯು ಪ್ರಗತಿಯಲ್ಲಿರುತ್ತದೆ. |
| 17 | ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ (ಬಾಕಿ) | 93.00 | 0 | 0 | ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆ ಕಿ.ಮೀ.0.00 ದಿಂದ 68.24 (ಬಾಕಿ ಕಾಮಗಾರಿಗಳು) ರ ಆಧುನೀಕರಣದ ಪ್ಯಾಕೇಜ್ ಕಾಮಗಾರಿ ಇತ್ತೀಚಿಗೆ ಗುತ್ತಿಗೆ ವಹಿಸಿದ್ದು, ಪ್ರಗತಿಯಲ್ಲಿರುತ್ತವೆ. |
| 18 | ಆಲಮಟ್ಟಿ ಬಲದಂಡೆ ಕಾಲುವೆ ಕಿ.ಮೀ. 2.00 ರಿಂದ 5.00 ರವರೆಗಿನ ಆಧುನೀಕರಣ. | 9.98 | 0 | 0 | ಸದರಿ ಆಧುನೀಕರಣದ ಪ್ಯಾಕೇಜ್ ಕಾಮಗಾರಿ ಇತ್ತೀಚಿಗೆ ಗುತ್ತಿಗೆ ವಹಿಸಿದ್ದು, ಪ್ರಗತಿಯಲ್ಲಿರುತ್ತವೆ. |
| **ಕೆರೆ ತುಂಬುವ ಯೋಜನೆಗಳು** | | | | | |
| 19 | ಯಾದಗಿರ್ ಜಿಲ್ಲೆಯಡಿ ಯರಗೋಳ & ಇತರೆ ಕೆರೆ ತುಂಬುವ ಯೋಜನೆ ಮತ್ತು ರಸ್ತೆ ಕಾಮಗಾರಿಗಳು | 45.45 | 0 | 0 | ಪೂರ್ಣಗೊಂಡಿದೆ. |
| 20 | ಭೀಮಾ ನದಿಯಿಂದ ನೀರನ್ನು ಎತ್ತಿ ಯಾದಗಿರಿ ಜಿಲ್ಲೆಯ 35 ಕೆರೆ ತುಂಬುವ ಯೋಜನೆ | 352.00 | 0 | 0 | ಪೂರ್ಣಗೊಂಡಿದೆ. |

| ಕ್ರ.ಸಂ | ಯೋಜನೆ | ಅಂದಾಜು ಮೊತ್ತ ರೂ.ಕೋಟಿಗಳಲ್ಲಿ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಇಲ್ಲಿಯವರೆಗೆ ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಪ್ರಸ್ತುತ ಹಂತ |
|---|---|---|---|---|---|
| 21 | ಕೃಷ್ಣಾ ನದಿಯಿಂದ ನೀರನ್ನು ಎತ್ತಿ ರಾಯಚೂರು ತಾಲ್ಲೂಕಿನ 18 ಕೆರೆ ತುಂಬುವ ಯೋಜನೆ | 192.00 | 0 | 0 | ಸದರಿ ಕೆರೆ ತುಂಬುವ ಯೋಜನೆ ಟರ್ನ ಕೀ ಆಧಾರಿತ ಕಾಮಗಾರಿಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. |
| 22 | ಭೀಮಾ ನದಿಯಿಂದ ನೀರನ್ನು ಎತ್ತಿ ಗುರುಮಿಟ್‌ಕಲ್ ತಾಲ್ಲೂಕಿನ 20 ಕೆರೆ ತುಂಬುವ ಯೋಜನೆ | 165.00 | 0 | 0 | ಸದರಿ ಕೆರೆ ತುಂಬುವ ಯೋಜನೆ ಟರ್ನ ಕೀ ಆಧಾರಿತ ಕಾಮಗಾರಿ ಪ್ರಗತಿಯಲ್ಲಿದೆ. |
| 23 | ಕೃಷ್ಣಾ ನದಿಯಿಂದ ನೀರನ್ನು ಎತ್ತಿ ದೇವದುರ್ಗಾ ತಾಲ್ಲೂಕಿನ 28 ಕೆರೆ ತುಂಬುವ ಯೋಜನೆ | 406.50 | 0 | 0 | ಸದರಿ ಕೆರೆ ತುಂಬುವ ಯೋಜನೆ ಟರ್ನ ಕೀ ಆಧಾರಿತ ಕಾಮಗಾರಿ ಪ್ರಗತಿಯಲ್ಲಿದೆ. |
| **ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳು** | | | | | |
| 24 | ಮಲಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ–ಕೂಡಲಸಂಗಮ ಸೇತುವೆ ನಿರ್ಮಾಣ | 59.80 | 0 | 0 | ಕಾಮಗಾರಿ ಪೂರ್ಣಗೊಂಡಿದೆ. |
| 25 | ಭೀಮಾ ನದಿಗೆ ಅಡ್ಡಲಾಗಿ 4 ಬ್ಯಾರೇಜುಗಳಿಗೆ ವರ್ಟಿಕಲ್ ಗೇಟುಗಳ ಅಳವಡಿಕೆ | 213.00 | 0 | 0 | ಯಾದಗೀರ, ಜೋಳದಡಗಿ–ಗೂಡೂರ, ಘತ್ತರಗಾ ಮತ್ತು ಕಲ್ಲೂರ 'ಬಿ' ಬ್ಯಾರೇಜಗಳಡಿ ಯಾಂತ್ರಿಕ ಕಾರ್ಯಾಚರಣೆಯ ವರ್ಟಿಕಲ್ ಲಿಫ್ಟ ಗೇಟುಗಳ ಅಳವಡಿಕೆ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ. |
| 26 | ಕೋರ್ತಿ–ಕೊಲ್ಹಾರ್ ಸೇತುವೆ ಪುನಃಶ್ಚೇತನ | 46.74 | 0 | 0 | ಕೋರ್ತಿ–ಕೋಲ್ಹಾರ ಸೇತುವೆ ಬಲಪಡಿಸುವಿಕೆ ಕಾಮಗಾರಿ ಪೂರ್ಣಗೊಂಡಿದೆ. |
| 27 | ಮಲಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ–ಕೂಡಲಸಂಗಮ ಸೇತುವೆ ಯ ಅಪ್ರೋಚ್ ರಸ್ತೆ ನಿರ್ಮಾಣ | 9.40 | 0 | 0 | ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

ಅನುಬಂಧ-2

## ಕರ್ನಾಟಕ ನೀರಾವರಿ ನಿಗಮ ನಿಯಮಿತ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) ಇವರ ಪ್ರಶ್ನೆ ಸಂಖ್ಯೆ:841(1027)ಕ್ಕೆ ಉತ್ತರ**

**ಕರ್ನಾಟಕ ನೀರಾವರಿ ನಿಗಮದಡಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ವಿವರ**

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| 1 | 2 | 3 | 4 | 5 | 6 | 8 |
| ಮಲಪ್ರಭಾ ಯೋಜನಾ ವಲಯ, ಧಾರವಾಡ. | | | | | | |
| 1 | ಹಾವೇರಿ | ಶಿಗ್ಗಾಂವ, ಸವಣೂರು & ಹಾನಗಲ್ | ಶಿಗ್ಗಾಂವ ಏತ ನೀರಾವರಿ ಯೋಜನೆ | 532.00 | 13500 | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಹಾವೇರಿ | ಸವಣೂರು | ಸವಣೂರ ಏತ ನೀರಾವರಿ ಯೋಜನೆ | 690.00 | 15500 | ಕಾಮಗಾರಿ ಪ್ರಗತಿಯಲ್ಲಿದೆ. |
| ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ | | | | | | |
| 3 | ಶಿವಮೊಗ್ಗ, ದಾವಣಗೆರೆ & ಹಾವೇರಿ | ತೀರ್ಥಹಳ್ಳಿ, ಶಿವಮೊಗ್ಗ ರೂರಲ್, ಶಿವಮೊಗ್ಗ ಅರ್ಬನ್, ಹೊನ್ನಾಳಿ, ಹರಿಹರ, ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ, ಹಾನ್ಗಲ್, ಬ್ಯಾಡಗಿ | ತುಂಗಾ ಮೇಲ್ದಂಡೆ ಯೋಜನೆ | 3395.02 | 80494 | ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |
| 4 | ಉಡುಪಿ | ಂದಾಪುರ, ಉಡುಪಿ | ವಾರಾಹಿ ಯೋಜನೆ | 1789.50 | 15702 | ಯೋಜನೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಡ್ಯಾಂ/ಡೈವರ್ಶನ್ ವಿಯರ್, ಎಡದಂಡೆ ಕಾಲುವೆ, ಲಿಫ್ಟ್ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಬಲದಂಡೆ ಕಾಲುವೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 5 | ಶಿವಮೊಗ್ಗ | ಸೊರಬ | ದಂಡಾವತಿ ಜಲಾಶಯ ಯೋಜನೆ | 272.00 | 6933 | ಸ್ಥಳೀಯ ವಿರೋಧದಿಂದ ಮೂಲ ಯೋಜನೆಯು ಪ್ರಾರಂಭವಾಗಿರುವುದಿಲ್ಲ. ಪ್ರಸ್ತುತ ಮಾರ್ಪಾಡಿತ ವಿವರವಾದ ಯೋಜನಾ ವರದಿಯು ತಯಾರಿಕಾ ಹಂತದಲ್ಲಿದೆ. |

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| 6 | ದಕ್ಷಿಣ ಕನ್ನಡ | ಬೆಳ್ತಂಗಡಿ | ಬೆಳ್ತಂಗಡಿ ಏತ ನೀರಾವರಿ ಯೋಜನೆ | 240.00 | 1100 | ಪಂಪ್ ಹೌಸ್ ಕಾಮಗಾರಿ ಪೂರ್ಣಗೊಂಡಿದ್ದು, ಬ್ಯಾರೇಜ್ ಕಾಮಗಾರಿ ಮತ್ತು ರೈಸಿಂಗ್ ಮೈನ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 7 | ಶಿವಮೊಗ್ಗ & ದಾವಣಗೆರೆ | ಶಿವಮೊಗ್ಗ ರೂರಲ್, ಹೊನ್ನಾಳಿ | ತುಂಗಾ ಕಾಲುವೆಗಳ ಆಧುನೀರಣ ಯೋಜನೆ | 309.00 | 8705 | ಸದರಿ ಯೋಜನೆಯಡಿಯಲ್ಲಿ 2 ಪ್ಯಾಕೇಜ್ ಕಾಮಗಾರಿಗಳಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |
| 8 | ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ & ವಿಜಯನಗರ | ಹರಪ್ಪನಹಳ್ಳಿ, ಹರಿಹರ, ದಾವಣಗೆರೆ ಉತ್ತರ, ದಾವಣಗೆರೆ ದಕ್ಷಿಣ, ಚೆನ್ನಗಿರಿ, ಮಾಯಕೊಂಡ, ಭದ್ರಾವತಿ, ಶಿವಮೊಗ್ಗ ರೂರಲ್, ಹರಿಹರ | ಭದ್ರಾ ಕಾಲುವೆಗಳ ಆಧುನೀರಣ ಯೋಜನೆ | 1175.79 | 105570 | ಸದರಿ ಯೋಜನೆಯಡಿಯಲ್ಲಿ 34 ಪ್ಯಾಕೇಜ್ ಕಾಮಗಾರಿಗಳಿದ್ದು, 28 ಪ್ಯಾಕೇಜ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 6 ಪ್ಯಾಕೇಜ್ ಕಾಮಗಾರಿಗಳನ್ನು ಹಿಂಪಡೆಯುವ ಪ್ರಸ್ತಾವನೆ ಅನುಮೋದನೆ ಗೊಂಡಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |
| ನೀರಾವರಿ ಕೇಂದ್ರ ವಲಯ, ಮುನಿರಾಬಾದ್ | | | | | | |
| 9 | ಬಳ್ಳಾರಿ | ಹಗರಿಬೊಮ್ಮನಹಳ್ಳಿ | ಚಿಲವಾರ ಬಂಡಿ ಏತ ನೀರಾವರಿ ಯೋಜನೆ | 63.60 | 5000 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಪರಿ ಶಿಷ್ಟ ಜಾತಿ ಮತ್ತು ಪರಿ ಶಿಷ್ಟ ಪಂಗಡದ ಸಮುದಾಯಕ್ಕೆ ಸೇರಿದ ನೀರಾವರಿ ವಂಚಿತ 5000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ ಜಾಕ್‌ವೆಲ್ & ಪಂಪ್‌ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೇನ್– ಒಟ್ಟು 5.885 ಕಿ.ಮೀ ಇದ್ದು ಪೈಕಿ – 5.885 ಕಿ.ಮೀ ವರೆಗೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ . ಕೆನಾಲ್‌ಗಳ ಅಗೆತ ಪೂರ್ಣಗೊಂಡಿರುತ್ತದೆ. ಮತ್ತು 29 ಕಿ.ಮೀ. ಇದ್ದು 12 ಕಿ.ಮೀ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸರಬರಾಜು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 10 | ಕೊಪ್ಪಳ | ಕೊಪ್ಪಳ | ಅಳವಂಡಿ ಬೆಟಗೇರಿ ಏತ ನೀರಾವರಿ | 66.63 | 2428 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಬಳಸಿ 2428 ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ.ಜಾಕ್‌ವೆಲ್ & ಪಂಪ್‌ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೇನ್– ಒಟ್ಟು 16.80 ಕಿ.ಮೀ ಇದ್ದು ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಡೆಲಿವರಿ ಚೇಂಬರ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿದ್ಯುತ್ ಸರಬರಾಜು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. All RCC Poles erected. ಬೆಟಗೇರಿ ಗ್ರಾಮಸ್ಥರು ಮಾರ್ಗಮಧ್ಯದಲ್ಲಿ 3000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಬೇಡಿಕೆ ಇಟ್ಟಿದ್ದು ಸದರಿ ಕಾಮಗಾರಿಯನ್ನು ಮುಂದುವರೆಸಲು ಅಡ್ಡಿಪಡಿಸಿರುತ್ತಾರೆ. ಆದ್ದರಿಂದ ಸದರಿ ಹೆಚ್ಚುವರಿ 3000 ಎಕರೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 11 | ಕೊಪ್ಪಳ | ಕೊಪ್ಪಳ | ಅಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆ (ಹೆಚ್ಚುವರಿ 3000 ಎಕರೆಗೆ ನೀರು ಒದಗಿಸುವ ಕಾಮಗಾರಿ ಯೋಜನೆ) | 4.22 | 3000 | ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.ರೈಸಿಂಗ್ ಮೇನ್– ಒಟ್ಟು 4.30 ಕಿ.ಮೀ ಇದ್ದು ಪೈಕಿ – 1.80 ಕಿ.ಮೀ ವರೆಗೆ ಪೈಪ್ ಲೇಯಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| 12 | ಕೊಪ್ಪಳ | ಕೊಪ್ಪಳ | ಬಹದ್ದೂರ ಬಂಡಿ ಏತ ನೀರಾವರಿ ಯೋಜನೆ | 56.55 | 5261 | ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಬಳಸಿ ಕೊಪ್ಪಳ ತಾಲೂಕಿನ 5261 ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ. ಜಾಕ್‌ವೆಲ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಹಾಗೂ ರೈಸಿಂಗ್ ಮೇನ್ 6.10 ಕಿ.ಮೀ. ಇದ್ದು, 6.10 ಕಿ.ಮೀ ಪೂರ್ಣಗೊಂಡಿರುತ್ತದೆ.ಜಾಕ್‌ವೆಲ್ ಕಂ ಪಂಪ್ ಹೌಸ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಪಂಪ್ಸ್ & ಮೋಟರ್ಸ್ ಪೂರೈಕೆಯಾಗಿದ್ದು ಅಳವಡಿಕೆ ಪ್ರಗತಿಯಲ್ಲಿರುತ್ತದೆ. 2 ಡೆಲಿವರಿ ಚೆಂಬರ್ ಗಳ ಪೈಕಿ 1 ರ ಕಾಮಗಾರಿ ಪೂರ್ಣಗೊಂಡಿರುತ್ತದೆ.ವಿದ್ಯುತ್ ಕಾಮಗಾರಿಯ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಅಂದಾಜು ಪಟ್ಟಿಯು ಅನುಮೊದನೆಯಾದ ನಂತರ ಕಾಮಗಾರಿಯನ್ನು ಪ್ರಾರಂಬಿಸಬೇಕಾಗಿರುತ್ತದೆ. ಇನ್‌ಟೆಕ್ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ.ಸದರಿ ಕಾಮಗಾರಿಯಲ್ಲಿ 1 ಸರ್ಜ್ ಪ್ರೊಟೇಕ್ಷನ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 13 | ಕೊಪ್ಪಳ | ಕನಕಗಿರಿ | ವಿತರಣಾ ಕಾಲುವೆಯ 25 ಮತ್ತು 31 ರಲ್ಲಿನ 17225.59 ಎಕರೆ ನೀರಾವರಿ ವಂಚಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ | 89.11 | 17225.59 | ವಿತರಣಾ ಕಾಲುವೆಯ 25 ಮತ್ತು 31 ರಲ್ಲಿನ 17225.59 ಎಕರೆ ನೀರಾವರಿ ವಂಚಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ.ಜಾಕ್‌ವೆಲ್ ಸಂಖ್ಯೆ:4 ಇದ್ದು, 4 ಜಾಕ್‌ವೇಲ್ ಪೂರ್ಣಗೊಂಡಿರುತ್ತವೆ.<br>ರೈಸಿಂಗ್‌ಮೇನ್ ಉದ್ದ 35.99 ಕಿ.ಮೀ. ಇದ್ದು, ಡಿ–31 ರ ಉಳೇನೂರು ಗ್ರಾಮಸ್ಥರು ಹೆಚ್ಚುವರಿಯಾಗಿ 1.60 ಕಿ.ಮೀ. ಉದ್ದದ ರೈಸಿಂಗ್ ಮೇನ್‌ನ್ನು ಅಳವಡಿಸಲು ರೈತರು ಒತ್ತಾಯಿಸಿದ್ದು, ಇದರಿಂದ 1.20 ಕಿ.ಮೀ. ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಇದರಲ್ಲಿ 31.99 ಕಿ.ಮೀ. ಪೈಪ್ ಲೇಯಿಂಗ್ ಪೂರ್ಣಗೊಂಡಿರುತ್ತದೆ.4 ಡೆಲಿವರಿ ಚೇಂಬರ್ ಕಾಮಗಾರಿಗಳ ಪೈಕಿ, 3 ಡೆಲಿವರಿ ಚೇಂಬರ್‌ಗಳು ಪೂರ್ಣಗೊಂಡಿದ್ದು, 1 ಡೆಲಿವೆರಿ ಚೇಂಬರ್ ಪ್ರಗತಿಯಲ್ಲಿರುತ್ತದೆ. ಕರಡೋಣ, ರಾಮದುರ್ಗ, ಮುಷ್ಟೂರು, ಸಬ್‌ಸ್ಟೇಷನ್ ಕಾಮಗಾರಿ ಹಾಗೂ ಟ್ರಾನ್ಸಮಿಷನ್ ಲೈನ್ ಪೂರ್ಣಗೊಂಡಿರುತ್ತದೆ. ಡಿ–31 |
| 14 | ರಾಯಚೂರು | ಸಿಂಧನೂರು | ತಿಮ್ಮಾಪುರ ಏತ ನೀರಾವರಿ ಯೊಜನೆ | 90.60 | 14150 | ಸದರಿ ಕಾಮಗಾರಿಯು ಡಿ–54 ರ 14150 ಹೆಕ್ಟರ್ ನೀರಾವರಿ ವಂಚಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಯಾಗಿರತ್ತದೆ. Jackwell/Pumphouse ಕಾಮಗಾರಿಯಲ್ಲಿ control room Slab rienforcement ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯ ರೈಸಿಂಗಮೇನ್ 17.00 ಕಿ.ಮೀ. ಪೂರ್ಣಗೊಂಡಿರುತ್ತದೆ. ಪಂಪ್ ಮೋಟರ್‌ಗಳನ್ನು ಕಾಮಗಾರಿ ಸ್ಥಳಕ್ಕೆ ಸರಬರಾಜು ಮಾಡಲಾಗಿರುತ್ತದೆ. Sub Station-RCC pole erection ಕಾಮಗಾರಿ ಪೂರ್ಣಗೊಂಡಿದ್ದು Stringing ಕಾಮಗಾರಿ ಪ್ರಗತಿಯಲ್ಲಿರುತ್ತದೆ. Surge Protection- ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| 15 | ಕೊಪ್ಪಳ, ಗದಗ, ವಿಜಯನಗರ | ಶಿರಹಟ್ಟಿ, ಗದಗ, ರೋಣ, ಕೊಪ್ಪಳ, ಹೂವಿನಹಡಗಲಿ | ಸಿಂಗಟಾಲೂರು ಏತ ನೀರಾವರಿ ಯೋಜನೆ | 5768.04 | 107380 | ಸಿಂಗಟಾಲೂರು ಏತನೀರಾವರಿ ಯೋಜನೆ ಅಡಿಯಲ್ಲಿ 1,07,380 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಯೋಜನೆಯಾಗಿರುತ್ತದೆ.. ಇದರಲ್ಲಿ ಈಗಾಗಲೇ 19587 ಹೆಕ್ಟೇರ್ ಪ್ರದೇಶಕ್ಕೆ ಹರಿನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಬಾಕಿ ಉಳಿದ 87793 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.ಸದರಿ ಆಲೂರು ಬನ್ನಿಕೊಪ್ಪ ಏತ ನೀರಾವರಿ ಯೋಜನೆಯ ಜಾಕ್‌ವೆಲ್, ಪಂಪ್‌ಹೌಸ್, ಡೆಲಿವೇರಿ ಚೇಂಬರ್ ಪೂರ್ಣಗೊಂಡಿದ್ದು, ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯು ಬಹುತೇಕವಾಗಿ ಪೂರ್ಣಗೊಂಡಿದ್ದು, ಕಮಿಷನಿಂಗ್ ಹಂತದಲ್ಲಿರುತ್ತದೆ. |
| ನೀರಾವರಿ ಕೇಂದ್ರ ವಲಯ, ಮುನಿರಾಬಾದ್ | | | | | | |
| 16 | ಕಲಬುರಗಿ | ಅಫಜಲಪೂರ | ಭೀಮಾ ಏತ ನೀರಾವರಿ ಯೋಜನೆ | 964.00 | 24292 | ಯೋಜನೆ ಪೂರ್ಣಗೊಂಡಿದೆ. |
| 17 | ಕಲಬುರಗಿ | ಚಿಂಚೋಳಿ/ ಸೇಡಂ | ಕೆಳದಂಡೆ ಮುಲ್ಲಾಮಾರಿ ಯೋಜನೆ | 303.00 | 9713 | ಯೋಜನೆ ಪೂರ್ಣಗೊಂಡಿದೆ. |
| 18 | ಕಲಬುರಗಿ | ಕಲಬುರಗಿ ಗ್ರಾಮೀಣ /ಚಿಂಚೋಳಿ | ಗಂಡೋರಿನಾಲಾ ಯೋಜನೆ | 385.00 | 7943 | ಯೋಜನೆ ಪೂರ್ಣಗೊಂಡಿದೆ. |
| 19 | ಕಲಬುರಗಿ | ಆಳಂದ / ಅಫಜಲಪೂರ | ಅಮರ್ಜಾ ಯೋಜನೆ | 343.75 | 8903 | ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| 20 | ಕಲಬುರಗಿ | ಚಿತ್ತಾಪೂರ / ಚಿಂಚೋಳ್ಳಿ / ಸೇಡಂ | ಬೆಣ್ಣೆತೋರಾ ಯೋಜನೆ | 798.63 | 20234 | ಯೋಜನೆ ಪೂರ್ಣಗೊಂಡಿದೆ. |
| 21 | ಯಾದಗೀರ | ಗುರುಮಿಠಕಲ್ | ಹತ್ತಿಕುಣಿ ಯೋಜನೆ | 5.70 | 2145 | ಯೋಜನೆ ಪೂರ್ಣಗೊಂಡಿದೆ. |
| 22 | ಯಾದಗೀರ | ಗುರುಮಿಠಕಲ್ | ಸೌದಾಗರ ಯೋಜನೆ | 1.23 | 1417 | ಯೋಜನೆ ಪೂರ್ಣಗೊಂಡಿದೆ. |
| 23 | ಬೀದರ | ಬೀದರ ದಕ್ಷಿಣ / ಹುಮನಾಬಾದ / ಭಾಲ್ಕಿ | ಕಾರಂಜಾ ಯೋಜನೆ | 635.18 | 27266 | ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| 24 | ಕಗಬುರಗಿ / ಬೀದರ | ಕಲಬುರಗಿ ಗ್ರಾಮೀಣ / ಹುಮನಾಬಾದ | ಮೇಲ್ದಂಡೆ ಮುಲ್ಲಾಮಾರಿ ಯೋಜನೆ | 74.84 | 3279 | ಯೋಜನೆ ಪೂರ್ಣಗೊಂಡಿದೆ. |
| 25 | ಬೀದರ | ಔರಾದ | Survey Investigation,Design,supply,Erection,Testing and commissioning of lift irrigation System for filling up 10 tanks out of 36 tanks MI/ZP tanks in stage 1 by lifting water from manjira river near balat buzurg village located on left bank of upstream of halhalli barrage of aurad taluka of bidar district consisting of the following components construction of jackwell cum pumphouse ,vertical turbine pumps coupled to HT motors electrical work Substation,Gravity network etc: stage 1 works on turn key basis. | 560.70 | 8188 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 26 | ಬೀದರ | ಬಸವಕಲ್ಯಾಣ / ಭಾಲ್ಕಿ | ಚುಳುಕಿನಾಲಾ ಯೋಜನೆ | 15.53 | 4047 | ಯೋಜನೆ ಪೂರ್ಣಗೊಂಡಿದೆ. |
| 27 | ಕಲಬುರಗಿ | ಚಿಂಚೋಳ್ಳಿ | ಚಂದ್ರಂಪಳ್ಳಿ ಯೋಜನೆ | 14.41 | 5223 | ಯೋಜನೆ ಪೂರ್ಣಗೊಂಡಿದೆ. |
| 28 | ಕಲಬುರಗಿ | ಸೇಡಂ | "Providing Irrigation facility for Drought Affected areas in Sedam Assembly Constituency, Kalaburgi District by lifting water from Kagina River "Yeddalli Lift irrigation Scheme" and Providing Irrigation facility for Drought Affected areas in Sedam Assembly Constituency, Kalaburgi District by lifting water from Kagina River "Ternalli Lift irrigation Scheme" | 143.80 | 3150 | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 29 | ಬೀದರ | ಭಾಲ್ಕಿ | ಮೇಹಕರ್ ಏತ ನೀರಾವರಿ | 762 | 10000 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 30 | ಕಲಬುರಗಿ | ಚಿಂಚೋಳ್ಳಿ | ಐನಾಪೂರ ಏತ ನೀರಾವರಿ ಯೋಜನೆ | 204.1 | 3710 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| ನೀರಾವರಿ (ಉತ್ತರ) ವಲಯ, ಬೆಳಗಾವಿ | | | | | | |
| 31 | ಬೆಳಗಾವಿ | ಕಿತ್ತೂರ & ಬೈಲಹೊಂಗಲ | ಚಚಡಿ ಏತ ನೀರಾವರಿ ಯೋಜನೆ | 165.46 | 2719 | ಹೆಡ್‌ವರ್ಕ ಕಾಮಗಾರಿಯು ಪೂರ್ಣಗೊಂಡಿದ್ದು, ರೈಸಿಂಗ್ ಮೇನ ಹಾಗೂ ಮುಖ್ಯ ಕಾಲುವೆ 0 ರಿಂದ 3 ರ ವರೆಗಿನ ಪ್ರದೇಶವು ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುವುದರಿಂದ, ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಬವಾಗಿದೆ. ಅರಣ್ಯ ಭೂ-ಸ್ವಾಧೀನ ಪ್ರದೇಶವು ಸ್ವಾಧೀನಗೊಳಿಸುವ ಸ್ಟೇಜ್-2 ಹಂತದ ಪ್ರಕ್ರಿಯೆಯು ಅನುಮೋದನೆಯ ಹಂತದಲ್ಲಿದ್ದು, ಯೋಜನೆಯ ಮುಖ್ಯ ಕಾಲುವೆ 6 ರಿಂದ 36, ವಿತರಣಾ ಕಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಹೊಲಗಾಲುವೆಗಳ ನಿರ್ಮಾಣ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 32 | ಬೆಳಗಾವಿ | ಬೈಲಹೊಂಗಲ | ಮುರಗೋಡ ಏತ ನೀರಾವರಿ ಯೋಜನೆ | 84.94 | 1939 | ಹೆಡ್‌ವರ್ಕ ಹಾಗೂ ರೈಸಿಂಗ್ ಮೇನ ಕಾಮಗಾರಿಗಳು ದಿ: 11-02-2019 ರಂದು ಪೂರ್ಣಗೊಂಡಿದ್ದು, ನಿರ್ವಹಿಸಿದ ಕಾಮಗಾರಿಯು ಗುತ್ತಿಗೆದಾರರ ಉಸ್ತುವಾರಿ ಮತ್ತು ನಿರ್ವಹಣೆ ಹಂತದಲ್ಲಿದೆ. ಯೋಜನೆಯ ಮುಖ್ಯ ಕಾಲುವೆ, ವಿತರಣಾ ಕಾಲುವೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಲಗಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 33 | ಬೆಳಗಾವಿ | ಗೋಕಾಕ | ಗೋಡಚಿನಮಲ್ಕಿ ಏತ ನೀರಾವರಿ ಯೋಜನೆ | 107.16 | 2568.42 | ಹೆಡ್‌ವರ್ಕ ಹಾಗೂ ರೈಸಿಂಗ್ ಮೇನ ಕಾಮಗಾರಿಗಳು ದಿ: 31-07-2022 ರಂದು ಪೂರ್ಣಗೊಂಡಿದ್ದು, ಕಾಮಗಾರಿ ಮುಕ್ತಾಯದ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿದೆ. ಯೋಜನೆಯ ಮುಖ್ಯ ಕಾಲುವೆ & ವಿತರಣಾ ಕಾಲುವೆಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಹೊಲಗಾಲುವೆ ನಿರ್ಮಾಣ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಬೇಕಾಗಿದೆ. |
| 34 | ಬೆಳಗಾವಿ | ಚಿಕ್ಕೋಡಿ | "Survey, Investigation, Design, Supply, Installation, Testing and Commissioning of Lift Irrigation System (Head Works consisting of construction of Intake Trough, Jack well cum pump house, Vertical Turbine pumps coupled to HT Motors, Pump house Electrical works, Necessary valves, Delivery Pipe, Manifold system, Power supply including terminal bay, 110 KV Electrical Sub Station, Transmission line, Rising Main and Manifold) for providing Irrigation facility to 7800 Ha of command area in Chikkodi taluk, Belagavi District by lifting water from Dudganga River near Kalloi Village including Operation and Maintenance for a period of 5 years after successful completion of work MAHALAXMI LIFT IRRIGATION SCHEME, Phase-I on Turn-Key Basis. | 382.30 | 7800 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 35 | ಬೆಳಗಾವಿ | ಚಿಕ್ಕೋಡಿ | Survey, Investigation, Design, Supply, Installation, Testing and Commissioning of Lift Irrigation System (Head Works consisting of construction of Intake Canal, Jack well cum pump house, Vertical Turbine pumps coupled to HT Motors, Power supply including terminal bay, 110 KV Electrical Sub Station, Transmission line, Rising Main and Delivery Chamber) for providing irrigation facility to 8390 Ha of command area in Chikkodi taluka of Belagavi District by lifting water from Krishna River near Kalloi village during Kharif season including Operation and Maintenance for a period of 5 years after successful completion of work KARAGAON LIFT IRRIGATION SCHEME on Turn-Key Basis" (PHASE-1 works) | 567.00 | 8390 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 36 | ಬೆಳಗಾವಿ | ಹುಕೇರಿ | SHRI ADAVISIDDESHWARA LIFT IRRIGATION SCHEME AND SHRI SHANKARLINGA LIFT IRRIGATION SCHEME in Hukkeri taluk Belagavi District by lifting water from Hiranyakeshi River on TURN KEY BASIS." | 133.53 | 2400 | ಕಾಮಗಾರಿ ಪ್ರಗತಿಯಲ್ಲಿದೆ. |
| 37 | ಬೆಳಗಾವಿ | ಬೀಳಗಿ | ಅನವಾಲ ಏತ ನೀರಾವರಿ ಯೋಜನೆ | 411.10 | 14525.43 | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 38 | ಬೆಳಗಾವಿ | ಬಾಗಲಕೋಟ | ಶಿರೂರ ಏತ ನೀರಾವರಿ ಯೋಜನೆ | 243.00 | 10224.57 | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |

| ಕ್ರ. ಸಂ | ಜಿಲ್ಲೆ | ಮತಕ್ಷೇತ್ರ | ಯೋಜನೆಯ ಹೆಸರು | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ (ಹೆ. ಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|
| 39 | ಬಾಗಲಕೋಟೆ | ತೇರದಾಳ, ಜಮಖಂಡಿ | ಕುಲಹಳ್ಳಿ-ಹುನ್ನೂರ ಏತ ನೀರಾವರಿ ಯೋಜನೆ | 73.75 | 9163.63 | ಪ್ರಸ್ತುತ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದೆ. |
| 40 | ಬಾಗಲಕೋಟೆ | ಬೀಳಗಿ & ಮುಧೋಳ | ಮಂಟೂರು ಮಹಾಲಕ್ಷ್ಮೀ ಏತ ನೀರಾವರಿ ಯೋಜನೆ | 273.21 | 12017.14 | ಪ್ರಸ್ತುತ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದೆ. |
| 41 | ಬಾಗಲಕೋಟೆ | ತೇರದಾಳ | ಸಸಾಲಟ್ಟಿ ಶಿವಲಿಂಗೇಶ್ವರ ಏತ ನೀರಾವರಿ ಯೋಜನೆ ಸ್ಕೀಂ-1 | 302.87 | 22918.57 | ಪ್ರಗತಿಯಲ್ಲಿರುತ್ತದೆ. |
| 42 | ಬೆಳಗಾವಿ ಮತ್ತು ಬಾಗಲಕೋಟೆ | ಅಥಣಿ, ಕಾಗವಾಡ ಮತ್ತುಜಮಖಂಡಿ | ಹಿಪ್ಪರಗಿ ಯೋಜನೆ | 1521.78 | 74742 | ಸದರಿ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿ ಮುಖ್ಯ ಕಾಲುವೆಯ ವಿತರಣಾ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಸದರಿ ಯೋಜನೆಯ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ |
| 43 | ವಿಜಯಪುರ, ಜಮಖಂಡಿ ಬೆಳಗಾವಿ | ಅಥಣಿ, ಜಮಖಂಡಿ ಮತ್ತು ತಿಕೋಟಾ | ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆ | 3572.00 | 57200 | ಸದರಿ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿ ಮುಖ್ಯ ಕಾಲುವೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿತರಣಾ ಕಾಲುವೆ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಹೊಲಗಾಲುವೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ವಿವಿಧ ಹಂತದಲ್ಲಿದೆ. |
| 44 | ಬೆಳಗಾವಿ | ಕಾಗವಾಡ | ಬಸವೇಶ್ವರ (ಕೆಂಪವಾಡ) ಯೋಜನೆ | 1120.36 | 27462 | ಜಾಕವೆಲ್ ಕಾಮಗಾರಿಯು ಪೂರ್ಣಗೊಂಡಿದ್ದು, 2 ಮೋಟಾರುಗಳನ್ನು ಅಳವಡಿಸಲಾಗಿದೆ. ಏರು ಕೊಳವೆ ಮಾರ್ಗವು 15.735 ಕೀ.ಮೀ ಉದ್ದವಿದ್ದು, ಸದರಿ ಕಾಮಾರಿಯು ಪೂರ್ಣಗೊಂಡಿದೆ ಮತ್ತು ಯೋಜನೆಗೆ ಬೇಕಾಗುವ 30 ಎಂ.ವ್ಹಿ.ಎ ವಿದ್ಯುತ್ ಶಕ್ತಿಯನ್ನು 220 ಸಬ್‌ಸ್ಟೇಶನ್ ಕುಡಚಿ ಇಲ್ಲಿಂದ ಪಡೆದುಕೊಳ್ಳಲಾಗಿದೆ. ಇದಕ್ಕಾಗಿ 10.45 ಕಿ.ಮೀ ಉದ್ದದ ಮಾರ್ಗ ವಿತರಣಾ ಲೈನ್ ಇದ್ದು ಅದರಲ್ಲಿ 39 ಟಾವರುಗಳು ಬರುತ್ತಿದ್ದುಮ ಅವುಗಳು ಪೂರ್ಣಗೊಂಡಿವೆ. ಮುಂದುವರೆದು 220 ಕೆ.ವ್ಹಿ ಉಪ ವಿದ್ಯುತ್ ಕೆಂದ್ರದಲ್ಲಿ ವಿದ್ಯುತ್ ಉಪಕರಣಗಳು ಅಳವಡಿಕೆಯಾಗಿದ್ದು, ಬಾಕಿ ಕೆಲಸಗಳು ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿ 57 ಕಿ.ಮೀ ಕಾಲುವೆ ಬರುತ್ತಿದ್ದು ಇದರಲ್ಲಿ 35 ಕಿ.ಮೀ ಕಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 38 ವಿತರಣಾ ಕಾಲುವೆಗಳು ಬರುತ್ತದ್ದು, ಅದರಲ್ಲಿ 36 ಪ್ರಗತಿಯಲ್ಲಿದೆ. |
| 45 | ಬಾಗಲಕೋಟೆ | ಜಮಖಂಡಿ | ವೆಂಕಟೇಶ್ವರ ಯೋಜನೆ | 174.42 | 7200 | ಸದರಿ ಯೋಜನೆಯ ಹೆಡ್‌ವರ್ಕ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಮುಖ್ಯ ಕಾಲುವೆಗಳು ಪೂರ್ಣಗೊಂಡಿರುತ್ತವೆ. ವಿತರಣಾ ಕಾಲುವೆಗಳು ಪ್ರಗತಿ ಹಂತದಲ್ಲಿದೆ. ಹೊಲಗಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ಸಮಾಲೋಚಕರನ್ನು ನೇಮಿಸುವ ಕಾರ್ಯ ಪ್ರಗತಿಯಲ್ಲಿದೆ. |
| 46 | ಬೆಳಗಾವಿ | ಕಿತ್ತೂರು | ಚನ್ನವೃಷಬೇಂದ್ರ ಏತ ನೀರಾವರಿ ಯೋಜನೆ | 520.00 | 11600 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 47 | ಬಾಗಲಕೋಟೆ | ಮುಧೋಳ, ರಬಕವಿ, ಬನಹಟ್ಟಿ | ಸಸಾಲಟ್ಟಿ ಶಿವಲಿಂಗೇಶ್ವರ ಏತ ನೀರಾವರಿ ಯೋಜನೆ ಸ್ಕೀಂ-2 | 209.00 | 9640.70 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 48 | ಬೆಳಗಾವಿ | ಅಥಣಿ | ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆ | 1486.81 | 9950 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 49 | ಬಾಗಲಕೋಟೆ | ಮುಧೋಳ | ಮೆಲ್ಲಿಗೇರಿ-ಹಲಗಲಿ ಏತ ನೀರಾವರಿ ಯೋಜನೆ | 197.00 | 3535 | ಮೊದಲನೇ ಹಂತದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 50 | ಬಾಗಲಕೋಟೆ | ಬೀಳಗಿ | ಮರೇಗುದ್ದಿ ಏತ ನೀರಾವರಿ ಯೋಜನೆ | 216.50 | 2035 | ಅಂದಾಜು ಪತ್ರಿಕೆ ಮತ್ತು ಡಿಟಿಪಿ ತಯಾರಿಕಾ ಹಂತದಲ್ಲಿದೆ. |
| 51 | ಬೆಳಗಾವಿ | ರಾಯಬಾಗ | ಕಾಡರಕೊಪ್ಪ ಏತ ನೀರಾವರಿ ಯೋಜನೆ | 265.00 | 8750 | ಅಂದಾಜು ಪತ್ರಿಕೆ ಮತ್ತು ಡಿಟಿಪಿ ತಯಾರಿಕಾ ಹಂತದಲ್ಲಿದೆ. |

ಕಾವೇರಿ ನೀರಾವರಿ ನಿಗಮ ನಿಯಮಿತ

ಅನುಬಂಧ -3

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ/ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 841(1027)ಕ್ಕೆ ಉತ್ತರಗಳು.

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿನ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ವಿವರ.

| ಕ್ರ. ಸಂ. | ನೀರಾವರಿ ಯೋಜನೆಯ ಹೆಸರು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ | ನೀರಾವರಿ ಸಾಮರ್ಥ್ಯ ಕಲ್ಪಿಸುವ ಗುರಿ (ಹೆ.ಗಳಲ್ಲಿ) | ಸಾಧಿಸಿರುವ ಸಾರ್ಮರ್ಥ್ಯ (ಹೆ.ಗಳಲ್ಲಿ) | ಉಳಿಕೆ ಸಾರ್ಮರ್ಥ್ಯ (ಹೆ.ಗಳಲ್ಲಿ) | ಯೋಜನೆಯ ಪ್ರಸ್ತುತ ಹಂತ |
|---|---|---|---|---|---|---|
| 1 | ಯಗಚಿ (ಕಾಮಸಮುದ್ರ ಶಾಖಾ ನಾಲೆ ಸೇರಿದಂತೆ) | 440.00 | 15575 | 10148 | 5427 | ಯೋಜನೆಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 2 | ಕಾಚೇನಹಳ್ಳಿ ಏತ ನೀರಾವರಿ ಯೋಜನೆ | 306.50 | 5099 | 3238 | 1862 | ಯೋಜನೆಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ |

## ಅನುಬಂಧ-4

## ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) ಇವರ ಪ್ರಶ್ನೆ ಸಂಖ್ಯೆ:841(1027)ಕ್ಕೆ ಉತ್ತರ

- ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಕಡೂರು ಕೆರೆ ತುಂಬಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಎಲ್ಲಾ ಯೋಜನೆಗಳು ಪ್ರಾರಂಭಗೊಂಡು ಪ್ರಸ್ತುತ ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ಮೇಲ್ಕಂಡ ಯೋಜನೆಗಳ ಪೈಕಿ ಭದ್ರಾ ಮೇಲ್ದಂಡೆ ಯೋಜನೆಯು ಸೂಕ್ಷ್ಮ ನೀರಾವರಿ ಪದ್ಧತಿ ಮೂಲಕ ಮಧ್ಯ ಕರ್ನಾಟಕದ ಬರಪೀಡಿತ ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳಲ್ಲಿನ 2,25,515 ಹೆಕ್ಟೇರ್ (5,57,022 ಎಕರೆ) ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಹಾಗೂ ಇದೇ ಜಿಲ್ಲೆಗಳಡಿ ಬರುವ 367 ಸಣ್ಣ ನೀರಾವರಿ ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50ರಷ್ಟಕ್ಕೆ ನೀರು ತುಂಬಿಸುವ ಯೋಜನೆಯಾಗಿದ್ದು, ಪ್ರಸ್ತುತ 2ಹಂತಗಳಲ್ಲಿ ಕೈಗೆತ್ತಿಕೊಂಡಿರುವ ಯೋಜನಾ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ವಿವರಗಳು ಕೆಳಕಂಡಂತಿರುತ್ತವೆ.

- ಹಂತ-1
  ಪ್ರಥಮ ಹಂತದಲ್ಲಿನ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡುವ (ಪ್ಯಾಕೇಜ್-1) ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದಂತೆ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ ನೀರನ್ನು ಲಿಫ್ಟ್ ಮಾಡುವ (ಪ್ಯಾಕೇಜ್-2) ಮತ್ತು ಅಜ್ಜಂಪುರ ಸುರಂಗ ನಿರ್ಮಾಣ ಮಾಡುವ (ಪ್ಯಾಕೇಜ್-3) ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ.

- ಯೋಜನೆಯಡಿ ಬರುವ ಪ್ಯಾಕೇಜ್-2 ಮತ್ತು 3ರ ಕಾಮಗಾರಿಗಳನ್ನು ಪೂರ್ಣಗೊಳಿಸಿ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದ ಮೂಲಕ ನೀರನ್ನು 2019-2020ನೇ ಸಾಲಿನಿಂದ ವಾಣಿ ವಿಲಾಸ ಸಾಗರಕ್ಕೆ ನೀರನ್ನು ಹರಿಸಲಾಗಿರುತ್ತದೆ.

- ಹಂತ-2:
  ತರೀಕೆರೆ ಏತ ನೀರಾವರಿ ಯೋಜನೆ: ತರೀಕೆರೆ ತಾಲ್ಲೂಕಿನ 79 ಕೆರೆಗಳನ್ನು ತುಂಬಿಸಲು ಮತ್ತು 20150 ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಲ್ಲಿ ನೀರಾವರಿ ಕಲ್ಪಿಸುವ (2 ಪ್ಯಾಕೇಜ್‌ಗಳಲ್ಲಿ) ತರೀಕೆರೆ ಏತ ನೀರಾವರಿ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯಡಿ ಒಂದು ಭಾಗವನ್ನು ಪ್ರಾಯೋಗಿಕವಾಗಿ ಚಾಲನೆಗೊಳಿಸಿದ್ದು (Trial Run)ಇದರಡಿ ಬರುವ ಸುಮಾರು 9892ಹೆಕ್ಟೇರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲಾಗಿದೆ.

- ಚಿತ್ರದುರ್ಗ ಶಾಖಾ ಕಾಲುವೆ: ಈ ಕಾಮಗಾರಿಯನ್ನು 12 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಒಟ್ಟು134.597 ಕಿ.ಮೀ ಉದ್ದದ ಕಾಲುವೆಯ ಪೈಕಿ 123.061 ಕಿ.ಮೀ ಕಾಲುವೆ ಅಗೆತ ಮತ್ತು 96.639 ಕಿ.ಮೀ ಕಾಲುವೆ ಲೈನಿಂಗ್ ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ತುಮಕೂರು ಶಾಖಾ ಕಾಲುವೆ: ಈ ಕಾಮಗಾರಿಯನ್ನು 9 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಒಟ್ಟು159.684 ಕಿ.ಮೀ ಉದ್ದದಕಾಲುವೆಯ ಪೈಕಿ 75.80 ಕಿ.ಮೀ ಕಾಲುವೆ ಅಗೆತ ಮತ್ತು 30.025 ಕಿ.ಮೀ ಕಾಲುವೆ ಲೈನಿಂಗ್ ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ಹನಿ ನೀರಾವರಿ: ಚಿತ್ರದುರ್ಗ ಶಾಖಾ ಕಾಲುವೆಯಡಿ 40749 ಹೆ. ಪ್ರದೇಶಕ್ಕೆ (3 ಪ್ಯಾಕೇಜ್), ತುಮಕೂರು ಶಾಖಾ ಕಾಲುವೆಯಡಿ 84900 ಹೆ. ಪ್ರದೇಶಕ್ಕೆ (9 ಪ್ಯಾಕೇಜ್) ಹಾಗೂ ಜಗಳೂರು ಶಾಖಾ ಕಾಲುವೆಯಡಿ13200 ಹೆ.ಪ್ರದೇಶಕ್ಕೆ (2 ಪ್ಯಾಕೇಜ್) ಹನಿ ನೀರಾವರಿ ಕಲ್ಪಿಸುವ ಒಟ್ಟು 14 ಪ್ಯಾಕೇಜ್

ಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ಕೆರೆ ತುಂಬಿಸುವ ಕಾಮಗಾರಿಗಳು: ಚಿತ್ರದುರ್ಗ ಶಾಖಾ ಕಾಲುವೆಯಿಂದ ಕವಲೊಡೆಯುವ ಹೊಳಲ್ಕೆರೆ, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಪಾವಗಡ ತಾಲ್ಲೂಕಿನ ಒಟ್ಟು 157 ಕೆರೆಗಳನ್ನು ತುಂಬಿಸುವ ಹಾಗೂ ತುಮಕೂರು ಶಾಖಾ ಕಾಲುವೆಯಿಂದ ಕವಲೊಡೆಯುವ ಶಿರಾ, ಹಿರಿಯೂರು ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಟ್ಟು 131 ಕೆರೆಗಳನ್ನು ತುಂಬಿಸುವ ಫೀಡರ್ ಕಾಮಗಾರಿಗಳನ್ನು 10 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

- ಭದ್ರಾ ಮೇಲ್ದಂಡೆ ಯೋಜನೆಗೆ ನವೆಂಬರ್-2023ರ ಅಂತ್ಯದವರೆಗೆ ಒಟ್ಟು ರೂ.8615.09 ಕೋಟಿಗಳ ಸಂಚಿತ ವೆಚ್ಚ ಮಾಡಲಾಗಿದೆ.

*******